ಉಡುಪಿಯ 'ಎಂಜಿಎಂ ಕಾಲೇಜು' ವರ್ಷಕ್ಕೆ ಕನಿಷ್ಠ 5 ಕೋಟಿ ಲೀಟರ್ ನೀರನ್ನು ಸಂಪಾದಿಸುವ ಸಿದ್ಧತೆ ಮಾಡಿಕೊಂಡಿದೆ. ಬಹುಶಃ, ಈ ಮಳೆನೀರ ಸಂಗ್ರಹ ಇಡೀ ರಾಜ್ಯಕ್ಕೆ ದೊಡ್ಡದಿರಬಹುದು. ಮಹಾತ್ಮನ ಹೆಸರಿನ ಕಾಲೇಜು ಗಾಂಧಿಯನ್ನು ಹೆಸರಿನಲ್ಲಿ ಮಾತ್ರವಲ್ಲ, ಕೃತಿಯಲ್ಲೂ ಅನುಷ್ಠಾನಕ್ಕೆ ತರುವ ಪ್ರಯತ್ನ ನಡೆಸಿದೆ. ಭೀಕರ ಬರ ಹಾಗೂ ಮಹಾಪೂರ ಎರಡನ್ನೂ ನಾಡು ಎದುರಿಸುತ್ತಿರುವ ವಿಷಮ ಸನ್ನಿವೇಶದಲ್ಲಿ, ನೀರ ಠೇವಣಿಯ ಇಲ್ಲಿನ ರೋಚಕಕಥನ ಈ ಕಾಲಕ್ಕೆ ಅಗತ್ಯವಾದ ಹೊಸದಾರಿಗಳನ್ನು ನಮಗೆ ಮನನ ಮಾಡಿಕೊಡುವಂತಿದೆ.

■ ಶ್ರೀ ಪಡ್ರೆ



ಎಂಜಿಎಂ ಕಾಲೇಜಿನ ಕಚೇರಿ ಕಟ್ಟಡ



# ಎಂಜಿಎಂ ನೀರ ನಡಿಗೆ ಮಳೆ ಪೂರ್ತಿ ಇಳೆಗೆ

ಕಷ್ಟಪಟ್ಟು ಕುಕ್ಕರುಗಾಲಲ್ಲಿ ಕುಳಿತ ಆ ಮಹನೀಯರು ಸ್ವಲ್ಪ ದಪ್ಪಗಿನ ಮಧ್ಯವಯಸ್ಕರು. ಮಕ್ಕಳಂತೆ ಅವರು ಆಗಾಗ ಆ ಬಾವಿಗೆ ಇಣುಕುತ್ತಿದ್ದರು. ತಲೆ ಮೇಲೆತ್ತಿದಾಗ ಮುಖ ಅರಳಿ ದುಂಡಗಾಗಿತ್ತು!

ಬಾವಿಯ 'ಇಣುಕು ಕಿಂಡಿ'ಯ ಮೂಲಕ ಹೊಸ ಜಗತ್ತನ್ನೇ ಕಂಡಂತಿತ್ತು ಅವರ ಮುಖಭಾವ. ಮರುಕ್ಷಣವೇ ಅವರ ಉಚ್ಚ ಸ್ವರದ ಘೋಷಣೆ ನಮಗೆಲ್ಲರಿಗೂ ಕೇಳುತ್ತದೆ. 'ಬಾವಿ ಪೂರ್ತಿ ತುಂಬಿದೆ; ಇನ್ನೂ ಮಳೆ ಬಂದರೆ ಓವರ್‌ಫ್ಲೋ ಆಗುವುದು ನಿಶ್ಚಯ'.

ಅವಿಭಜಿತ ದ.ಕ. ಜಿಲ್ಲೆಗೇ ಹೆಸರಾಗಿದ್ದ ಶಿಕ್ಷಣ ಸಂಸ್ಥೆ ಎಂಜಿಎಂ ಕಾಲೇಜು. ಆ ಕಾಲೇಜಿನ ಪ್ರಾಂಶುಪಾಲ ಇವರು, ಡಾ. ಎಂ. ಜಿ. ವಿಜಯ್. ಉಡುಪಿ ಮಣಿಪಾಲಗಳ ನಡುವಣ ಕುಂಜಿಬೆಟ್ಟಿನಲ್ಲಿ, ಹೆದ್ದಾರಿಯ ಅಂಚಿನಲ್ಲಿ ಈ ಕಾಲೇಜು ವಿಶಾಲವಾಗಿ ಚಾಚಿಕೊಂಡಿದೆ.

## ಮಳೆ ಕುಡಿಯುವ ಬಾವಿ!

ವಿಜಯ್ ಬಗ್ಗಿ ನೋಡಿದ ಬಾವಿ ಅಂತಿಂಥದ್ದಲ್ಲ. ಇಂಗುಬಾವಿ ಅಥವಾ ರೀಚಾರ್ಜ್ ವೆಲ್. ಮಳೆನೀರು ಇಂಗಿಸಲೆಂದೇ ತೋಡುವ ಬಾವಿಯಿದು. ಎಂಜಿಎಂ, ಅಂದರೆ ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ಈಚೆಗೆ ಒಂದೆರಡಲ್ಲ, ಐದು ಇಂಗುಬಾವಿ ತೋಡಿಸಿದೆ. ಮಳೆಗಾಲದ ಆರಂಭಕ್ಕೆ ಸಿದ್ಧವಾದ ಇವು ಈಗ ಆರಿಂಚಿನ ಪೈಪಿನಲ್ಲಿ ಇಳಿದು ಬರುವ ಚಾವಣಿ ನೀರನ್ನು ಗಟಗಟನೆ ಕುಡಿಯುತ್ತಿವೆ.

ಕಳೆದ ಬೇಸಿಗೆಯಲ್ಲಿ ಈ ಕಾಲೇಜು ತನ್ನ ಏಳು ದಶಕದ ಚರಿತ್ರೆಯಲ್ಲೇ ಅನುಭವಿಸದಷ್ಟು ನೀರ ಸಂಕಟಕ್ಕೆ ತುತ್ತಾಗಿತ್ತು. ತಕ್ಷಣ ಎಚ್ಚತ್ತ ಪ್ರಾಂಶುಪಾಲರು ಮತ್ತು ಆಡಳಿತ ವರ್ಗ 'ಮುಂದೆಂದೂ ಇಲ್ಲಿ ಬರ